**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 89/2020**

**ಚಾ.ಸಾಃ2, ಫ್ರಾ.ಸಾಃ2**

| | |
|---|---|
| ಸಾಕ್ಷಿದಾರನ ಹೆಸರು | ಸಾವೇರ ನರೋನಾ |
| ತಂದೆಯ ಹೆಸರು | ಡಿಯೋಗ ನರೋನಾ |
| ವಯಸ್ಸು | 43 ವರ್ಷಗಳು |
| ಉದ್ಯೋಗ | ಖಾಸಗಿ ಕೆಲಸ |
| ವಾಸ್ತವ್ಯ | ಚಂದಾವರ |

**ಸಾಕ್ಷಿಯನ್ನು ದಿನಾಂಕಃ 04-08-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ನಿಪಿ-2 ಸ್ಥಳ ಪಂಚನಾಮೆ ಹಾಗೂ ನಿಪಿ-3 ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅವುಗಳ ಮೇಲಿನ ಸಹಿಗಳನ್ನು ಗುರುತಿಸಿದ್ದರಿಂದ ಅವುಗಳ ಮೇಲಿನ ಸಾಕ್ಷಿ ಸಹಿಗಳನ್ನು ಕ್ರಮವಾಗಿ ನಿಪಿ-2(ಬಿ) ಮತ್ತು 3(ಬಿ) ಎಂದು ಗುರುತಿಸಲಾಯಿತು.

ದಿನಾಂಕ 01-01-2020 ರಂದು ಸದರಿ ಸಹಿಗಳನ್ನು ಹೊದಕೆ ಶಿರೂರು ಹೂವಿನ ಹಿತ್ತಲಿನಲ್ಲಿರುವ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿದ್ದಕ್ಕೆ ಸಂಬಂಧಿಸಿದಂತೆ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ಚಾಸಾ-3, ಪೋಲಿಸರು ಮತ್ತು ಇತರರು ಹಾಜರಿದ್ದರು. ಪೋಲಿಸರು ಕಳ್ಳತನದ ಬಗ್ಗೆ ಸ್ಥಳ ಪರಿಶೀಲನೆ ಮಾಡಿರುತ್ತಾರೆ. ಪೋಲಿಸರಿಗೆ ಸ್ಥಳವನ್ನು ನಾವು ಮತ್ತು ಚಾಸಾ-1 ತೋರಿಸಿರುತ್ತೇವೆ. ಕಪಾಟಿನ ಬೀಗ ಮತ್ತು ಬಾಗಿಲುಗಳಿಗೆ ಹಾಕಿದ್ದ ಬೀಗಗಳನ್ನು ಮುರಿಯಲಾಗಿತ್ತು. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿ ಬರೆದುಕೊಂಡು ನಕಾಶೆಯನ್ನು ತಯಾರಿಸಿರುತ್ತಾರೆ.

ಸಾಕ್ಷಿಗೆ ನಿಪಿ-4 ರಿಂದ 6 ಛಾಯಾಚಿತ್ರಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ಗುರುತಿಸಿ ಅವುಗಳನ್ನು ಪಂಚನಾಮೆ ಸಂದರ್ಭದಲ್ಲಿ ತೆಗೆಸಿದ್ದಾಗಿ ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಚಾಸಾ-1 ನನ್ನ ಸಂಬಂಧಿಕನಲ್ಲ. ಪಂಚನಾಮೆಗೆ ನನ್ನನ್ನು ಪೋಲಿಸರು ಬರಲು ಹೇಳಿರುತ್ತಾರೆ. ಪಂಚನಾಮೆಯನ್ನು ಪೋಲಿಸರು ಬರೆದಿರುತ್ತಾರೆ. ಮುರಿದಿದ್ದ ಬೀಗದ ತಟ್ಟೆಗಳನ್ನು ನಾನು ನೋಡಿರುವುದಿಲ್ಲ. ಸ್ಥಳಕ್ಕೆ ಚಾಸಾ-23 ಸಾವಿತ್ರಿ ಮೇಡಂ ಬಂದಿದ್ದರು. ಪಂಚನಾಮೆಯನ್ನು ಬರೆಯಲು ನಾವು ಮಾಹಿತಿಯನ್ನು ನೀಡಿದ್ದು ಚಾಸಾ-23 ರವರು ಬರೆದಿರುತ್ತಾರೆ. ನಾನು ಗುನ್ನಾ ಸ್ಥಳಕ್ಕೆ ಹೋಗಿದ್ದೆ ಮತ್ತು ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಿಪಿ–4 ರಿಂದ 6 ನ್ನು ಪೋಲಿಸರು ಸ್ಥಳದಲ್ಲಿ ತೆಗೆಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ರವರ ಮನೆಯಲ್ಲಿ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**